ರಿಂದ, ಏತಕ್ಕೆ ಈ ರೀತಿ ಆಯಿತು ಎಂದು ತಾವೇ ಉತ್ತರ ಕೊಡಬಹುದು. ಈ ವರ್ಷ ರಾಮದುರ್ಗ ತಾಲ್ಲೂಕ್ ಬಾರ್ಡರ್‌ವರೆಗೆ ಕೆಲಸ ಕಂಪ್ಲೀಟ್ ಆಗುತ್ತದೆ. ಬಾದಾಮಿ ತಾಲ್ಲೂಕಿಗೆ ಎಂಟರ್ ಆಗುತ್ತದೆ. ಬಾದಾಮಿ ತಾಲ್ಲೂಕು ಕೆಲಸ ಈ ವರ್ಷ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ 1984–85ರಲ್ಲಿ 5 ಸಾವಿರ ಹೆಕ್ಟೇರ್‌ಗೆ ನೀರು ಕೊಡತಕ್ಕ ವ್ಯವಸ್ಥೆ ಮಾಡುತ್ತೇವೆ. 29,855 ಹೆಕ್ಟೇರ್‌ಗೆ ಒಂದೇ ವರ್ಷದಲ್ಲಿ ಕೊಡಲಿಕ್ಕೆ ಆಗುವುದಿಲ್ಲ. ಮುಂದಿನ ಎರಡು ಮೂರು ವರ್ಷಗಳಲ್ಲಿ ನೀರು ಕೊಡಲು ಕೆಲಸ ಸ್ಪೀಡ್ ಅಪ್ ಮಾಡುತ್ತೇವೆ.

ವಿಷಯ : ಗಣಿ ಮತ್ತು ಭೂವಿಜ್ಞಾನ ಇಲಾಖೆ ಗ್ರಾನೈಟ್ ಕಲ್ಲುಗಳನ್ನು ಗುತ್ತಿಗೆ ನೀಡುವ ಕುರಿತು

ಪ್ರಶ್ನೆ. 162(10) ಶ್ರೀ ಕೆ.ಜಿ. ಶ್ರೀನಿವಾಸಮೂರ್ತಿ (ಸಾತನೂರು).— ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಕಳೆದ ಮೂರು ವರ್ಷಗಳಿಂದ ವಿವಿಧ ರಂಗಿನ ಮತ್ತು ಪ್ರಮಾಣ ಗ್ರಾನೈಟ್ ಕಲ್ಲನ್ನು ಕನಕಪುರ ತಾಲ್ಲೂಕಿನಿಂದ ವಿದೇಶಕ್ಕೆ ರಫ್ತು ಮಾಡಲು ಎಷ್ಟು ಜನರಿಗೆ ಗುತ್ತಿಗೆ ಕೊಡಲಾಗಿದೆ;

ಆ) ಗುತ್ತಿಗೆ ಪಡೆದಿರುವ ವ್ಯಕ್ತಿಗಳ ಹೆಸರು ಮತ್ತು ವಿಳಾಸ ;

ಇ) ಈ ವ್ಯಕ್ತಿಗಳು ಕಳೆದ ಮೂರು ವರ್ಷಗಳಿಂದ ವಿದೇಶಕ್ಕೆ ರಫ್ತು ಮಾಡಿರುವ ಕಲ್ಲುಗಳ ಪ್ರಮಾಣ ಎಷ್ಟು ;

ಈ) ಮೇಲ್ಕಂಡ ಪ್ರತಿ ವರ್ಷದಲ್ಲಿ ಸರ್ಕಾರವು ಪಡೆದ ರಾಜಧನ ಎಷ್ಟು ;

ಉ) ವ್ಯಕ್ತಿಗಳಿಗೆ ಗುತ್ತಿಗೆ ನೀಡಲಾಗಿರುವುದರಿಂದ ಮೈಸೂರು ಮಿನರಲ್ಸ್ ಲಿಮಿಟೆಡ್‌ನ ಬೇಡಿಕೆಗೆ ಧಕ್ಕೆ ಉಂಟಾಗಿದೆಯೇ ;

ಊ) ಎಲ್ಲ ಗ್ರಾನೈಟ್ ಕಲ್ಲುಗಳನ್ನು ಮೈಸೂರು ಮಿನರಲ್ಸ್ ನಿಯಮಿತ ವ್ಯಾಪ್ತಿಗೆ ಒಪ್ಪಿಸಲು ಸರ್ಕಾರವು ಆದೇಶವನ್ನು ಹೊರಡಿಸಿದೆಯೇ ;

ಋ) ಹಾಗಿದ್ದರೆ ಸರ್ಕಾರವು ಆದೇಶವನ್ನು ಯಾವಾಗ ಹೊರಡಿಸುತ್ತದೆ ?

ಉತ್ತರ : ಶ್ರೀ ಎಸ್.ಆರ್ ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು) — ಅ) 13 ಜನರಿಗೆ ಗುತ್ತಿಗೆಗಾಗಿ ಕೊಡಲಾಗಿದೆ.

ಆ) ಗುತ್ತಿಗೆದಾರರ ಹೆಸರು ಮತ್ತು ವಿಳಾಸವನ್ನು ವಿವರಪಟ್ಟಿಯಲ್ಲಿ 'ಆ' ರಲ್ಲಿ ಕೊಡಲಾಗಿದೆ.

ಇ) ಕಳೆದ 3 ವರ್ಷಗಳಲ್ಲಿ ವಿದೇಶಕ್ಕೆ ರಫ್ತು ಮಾಡಿದ ವಿವರ ಈ ರೀತಿ ಇದೆ.

1981	1982	1983
4882 ಮೆ.ಟನ್	15,973-78 ಮೆ.ಟನ್	15,490 ಮೆ.ಟನ್

ಈ) ರೂ. 97,650 ರೂ. 3,19 475-60 ರೂ. 3,09,000

ಉ) ಯಾವ ಧಕ್ಕೆಯೂ ಉಂಟಾಗಿಲ್ಲ.

ಊ) ಇಲ್ಲ.

ಋ) ಆದೇಶ ಹೊರಡಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ವಿವರ ಪಟ್ಟಿ, ಆ

1981, 1982, 1983ನೇ ಇಸವಿಯಲ್ಲಿ ಕನಕಪುರ ತಾಲ್ಲೂಕಿನಲ್ಲಿ ನೀಡಿರುವ 17 ಗುತ್ತಿಗೆದಾರರ ಪಟ್ಟಿ.

ಸಂ.	ಗುತ್ತಿಗೆದಾರರ ಹೆಸರು ಮತ್ತು ವಿಳಾಸ	ಗುತ್ತಿಗೆಗಳ ಸಂಖ್ಯೆ
1.	ಮೆ.ರೋಣಿ ತಾಲ್ಲೂಕ್ ಸ್ಟೋನ್ ಕಟ್ಟರ್ಸ್ ಆಂಡ್ ಆರ್ಥ್ ಡಿಗ್ಗರ್ಸ್ ಲೇಬರ್ ಕೋ ಆಪರೇಟಿವ್ ಸೊಸೈಟಿ, ನಾರೇಗಲ್ ರೋಣಿ ತಾಲ್ಲೂಕ್, ಧಾರವಾಡ ಜಿಲ್ಲೆ.	1
2.	ಶ್ರೀಮತಿ ಪ್ರೇಮಲೀಲ, ನಂ. 22ಎ, ಗ್ರಾಮದೇವತ ರೋಡ್, ಮಾವಳ್ಳಿ, ಬೆಂಗಳೂರು-40.	1
3.	ಮೆ.ಪಿ.ಕೆ.ಆರ್. ಎಕ್ಸ್‌ಪೋರ್ಟರ್ಸ್, ನಂ. 573, 8ನೇ ಬ್ಲಾಕ್, 8ನೇ ಸ್ಟೇಜ್, ವೆಸ್ಟ್ ಆಫ್ ಕಾರ್ಡ್ ರೋಡ್, ಬೆಂಗಳೂರು-79	1
4.	ಮೆ. ಮುದ್ದೇಶ್ವರ ಮೈನಿಂಗ್ ಇಂಡಸ್ಟ್ರೀಸ್, ಕಂಪನಿ, ನಂ. 147,2, 15ನೇ ಮುಖ್ಯರಸ್ತೆ, ಚಾಮರಾಜಪೇಟೆ, ಬೆಂಗಳೂರು-18	4
5.	ಶ್ರೀಮತಿ ಶಶಿಕಲ, ನಂ. 24, ಚರ್ಚ್ ರೋಡ್, ಬೆಂಗಳೂರು-27	2
6.	ಶ್ರೀಮತಿ ನಿರ್ಮಲ ಎಸ್. ಆಚಾರ್ಯ, ಕೇರ್ ಆಫ್ ಶ್ರೀಪತಿರಾವ್, ನಂ. 45, ಔಟ್ ಹೌಸ್,5ನೇ ಮುಖ್ಯರಸ್ತೆ,ಚಾಮರಾಜಪೇಟೆ,ಬೆಂಗಳೂರು–18	1

7.	ಮೆ. ಶೀಶ ಎಂಟರ್‌ಪ್ರೈಸಸ್, ನಂ. 27:1, ಮಿಷನ್ ರೋಡ್, ಬೆಂಗಳೂರು-21	1
8	ಶ್ರೀಮತಿ ಎಸ್. ಶಶಿ, ನಂ. 70:1, ಮಿಷನ್‌ರೋಡ್, ಬೆಂಗಳೂರು-21	1
9.	ಶ್ರೀ ಜಿ. ಎಸ್. ಬಸವರಾಜು, ನಂ. 2400, 10ನೇ ಮುಖ್ಯ ಬ್ಲಾಕ್. 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು-10	1
10.	ಮೆ. ಗಾಲಾಕ್ಸಿ ಎಂಟರ್‌ಪ್ರೈಸಸ್, ನಂ. 174, 5ನೇ ಕ್ರಾಸ್, ಗಾಂಧಿನಗರ, ಬೆಂಗಳೂರು-9.	1
11.	ಶ್ರೀ ಟಿ.ಆರ್.ಎನ್. ಸ್ವಾಮಿ, ನಂ. 293, 16ನೇ ಕ್ರಾಸ್, ಅಪ್ಪರ್ ಪ್ಯಾಲೇಸ್ ಆರ್ಚರ್ಡ್, ಬೆಂಗಳೂರು	1
12.	ಶ್ರೀ ಕ್ಲಿಫರ್ಡ್ ಡಿಸೋಜ, ದೇವಿಕೃಪ ಕಾನೂನು ಕಾಲೇಜಿನ ಹಿಂಭಾಗ, ಎಂ.ಜಿ. ರೋಡ್, ಮಂಗಳೂರು-1	1
13.	ಮೆ. ಮೈಸೂರು ಮಿನರಲ್ಸ್ ಲಿಮಿಟೆಡ್ ನಂ. 39, ಎಂ.ಜಿ ರೋಡ್, ಬೆಂಗಳೂರು-1	1
		17

ಶ್ರೀ ಕೆ.ಜಿ. ಶ್ರೀನಿವಾಸಮೂರ್ತಿ.— ಕನಕಪುರ ರೈತಸಂಘದವರು ಕೇವಲ ಮೂರು ತಿಂಗಳಲ್ಲಿ ಆರು ಲಕ್ಷ ರೂಪಾಯಿಗಿಂತಲೂ ಹೆಚ್ಚು ಹಣ ಗುತ್ತಿಗೆದಾರರಿಂದ ವಸೂಲು ಮಾಡಿರುವುದು ಗೊತ್ತಿದೆಯೇ ?

ಶ್ರೀ ಎಸ್.ಆರ್. ಬೊಮ್ಮಾಯಿ.— ರೈತಸಂಘದವರು ವಸೂಲು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಶ್ರೀ ಕೆ.ಜಿ. ಶ್ರೀನಿವಾಸಮೂರ್ತಿ.— ಎಷ್ಟು ಹಣ ಬಂದಿದೆ.

ಶ್ರೀ ಎಸ್.ಆರ್. ಬೊಮ್ಮಾಯಿ.— ವಿವರಗಳು ನನ್ನ ಹತ್ತಿರ ಇಲ್ಲ. ಆದರೆ ಹಣ ವಸೂಲು ಮಾಡಿದ್ದಾರೆಂದು ಗೊತ್ತಾಗಿದೆ

ಶ್ರೀ ಗೋವಿಂದ ಪಿ. ಒಡೆಯರಾಜ್.—ವಿವರಗಳು ತಮ್ಮ ಹತ್ತಿರ ಇಲ್ಲ ಎಂದು ಹೇಳಿದರೆ ಹೇಗೆ, ಒದಗಿಸಿಕೊಡುತ್ತೇವೆಂದು ಹೇಳಿ.

ಶ್ರೀ ಎಸ್.ಆರ್. ಬೊಮ್ಮಾಯಿ.— ಅದು ರೈತಸಂಘಕ್ಕೆ ಸಂಬಂಧಪಟ್ಟದ್ದು.

ಶ್ರೀ ಕೆ ಜಿ ಶ್ರೀನಿವಾಸಮೂರ್ತಿ.— ವ್ಯಕ್ತಿಗಳಿಗೆ ಗುತ್ತಿಗೆ ನೀಡಲಾಗಿರುವುದರಿಂದ ಮೈಸೂರು ಮಿನರಲ್ಸ್ ಲಿಮಿಟೆಡ್‌ನ ಬೇಡಿಕೆಗೆ ಧಕ್ಕೆ ಉಂಟಾಗಿದೆಯೇ ಎಂದು ಕೇಳಿದ್ದಕ್ಕೆ ಯಾವ ಧಕ್ಕೆಯೂ ಉಂಟಾಗಿಲ್ಲ ಎಂದು ಹೇಳಿದ್ದೀರಿ. ಇವೊತ್ತು ತಾವು 13 ಜನಗಳಿಗೆ ಲೈಸೆನ್ಸ್ ಕೊಟ್ಟಿದ್ದೀರಿ. ಆ ಲೈಸೆನ್ಸ್‌ಗಳನ್ನು ಕ್ಯಾನ್ಸಲ್ ಮಾಡಿ, ಮೈಸೂರು ಮಿನರಲ್ಸ್‌ನವರಿಗೆ ಕೊಡುವುದರಿಂದ, ಹೆಚ್ಚು ಲಾಭ ಆಗುವುದಿಲ್ಲವೇ ?

ಶ್ರೀ ಎಸ್ ಆರ್. ಬೊಮ್ಮಾಯಿ.— ಈ ಗ್ರಾನೈಟ್ ಕಲ್ಲುಗಳಿಗೆ ಪರದೇಶದಲ್ಲಿ ದೊಡ್ಡದಾದ ಬೇಡಿಕೆ ಇದೆ. ಈಗ ಖಾಸಗಿಯವರು ಹೆಚ್ಚಿನ ಲಾಭ ಪಡೆಯುತ್ತಿದ್ದಾರೆ. ಸರ್ಕಾರದ ಬೊಕ್ಕಸಕ್ಕೆ ಕಡಿಮೆ ಹಣ ಬರುತ್ತಿದೆ. ರಾಯಲ್ಟಿ ಬಗ್ಗೆ ಸರ್ಕಾರ ಕ್ರಮ ಕೈಗೊಂಡಿದೆ. ಕೆಲವು ಮಹತ್ವದ ಗಣಿಗಳನ್ನು ಎಂ ಎಂ.ಎಲ್ ಗೆ ವಹಿಸಿಕೊಡಬೇಕೆಂದು ಸೂಚನೆ ಬಂದಿದೆ ಆದು ಸರ್ಕಾರದ ಪರಿಶೀಲನೆಯಲ್ಲಿದೆ. ಸಾಧ್ಯವಾದರೆ ಮಹತ್ವದ ಗಣಿಗಳನ್ನು ಎಂ ಎಂ.ಎಲ್‌ಗೆ ಕೊಡುತ್ತೇವೆ.

ಶ್ರೀ ಎನ್. ಚಿಕ್ಕೇಗೌಡ — ಮೂರು ಲಕ್ಷ ರೂಪಾಯಿ ವಂತಿಗೆಯಾಗಿ ರೈತ ಸಂಘಕ್ಕೆ ಕೊಟ್ಟಿರುವುದು ನಿಜವೇ ?

ಶ್ರೀ ಎಸ್.ಆರ್. ಬೊಮ್ಮಾಯಿ.— ಸರ್ಕಾರ ವಂತಿಗೆಯಾಗಿ ಏನೂ ಕೊಟ್ಟಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.— ಎಂ.ಎಂ.ಎಲ್ ನವರು ಇದರಲ್ಲಿಯೂ ಸಹ ವ್ಯಾಪಾರ ಮಾಡುತ್ತಾ ಇರಬೇಕಾದರೆ ಮತ್ತು ಗಣಿಗಳಲ್ಲಿ ಅಷ್ಟೊಂದು ಲಾಭ ಬರುತ್ತಿರಬೇಕಾದರೆ, ಹಂತ ಹಂತವಾಗಿ ಬೇರೆಯವರಿಗೆ ತಪ್ಪಿಸಿ ಎಲ್ಲವನ್ನೂ ಎಂ.ಎಂ.ಎಲ್ ಗೆ ಕೊಡಲಿಕ್ಕೆ ತಿರ್ಮಾನ ಮಾಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಇದನ್ನು ಹಂತ ಹಂತವಾಗಿ ಸರ್ಕಾರದವರು ಮಾಡಬೇಕಾಗಿರುವುದರಿಂದ ಇದನ್ನು ಕೂಲಂಕುಷವಾಗಿ ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಮಾಣಿಕ್‌ರಾವ್ ಪಾಟೀಲ್.—ಸ್ವಾಮಿ, ರಾಜ್ಯದಲ್ಲಿ ರಾಯಲ್ಟಿ ಟ್ಯಾಕ್ಸನ್ನು ಸರ್ಕಾರದವರು ವಸೂಲ್ಮಾಡಬೇಕು. ಆದರೆ ಮಾನ್ಯ ಸದಸ್ಯರೊಬ್ಬರು ಬಹಳ ಜವಾಬ್ದಾರಿಯಿಂದ ಕನಕಪುರ ಕ್ವಾರಿಯಲ್ಲಿ ಕಂಟ್ರಾಕ್ಟರ್‌ರವರ ಹತ್ತಿರ ರಾಯಲ್ಟಿಯನ್ನು ರೈತ ಸಂಘದವರೇ ವಸೂಲ್ಮಾಡಿದ್ದಾರೆ ಎಂದು ಹೇಳಿದ್ದಾರೆ. ಇದನ್ನು ನೋಡಿದರೆ ನಮ್ಮ ರಾಜ್ಯದಲ್ಲಿ ಸರ್ಕಾರ ಅಸ್ತಿತ್ವದಲ್ಲಿದೆಯೋ, ಅಥವಾ

ಇಲ್ಲವೋ, ಎಂದು ತಿಳಿಯುವುದಿಲ್ಲ. ಒಂದು ವೇಳೆ ಅಷ್ಟೊತ್ತಿನಲ್ಲಿದ್ದರೆ ಆಡಳಿತವನ್ನು ನಡೆಸಲು ಇದಕ್ಕೆ ಶಕ್ತಿ ಇದೆಯೋ ಇಲ್ಲವೋ, ಎನ್ನುವ ಅನುಮಾನ ನನಗೆ ಬರುತ್ತಿದೆ. ಅದೇ ಆಲ್ಲದೆ ಈ ಕ್ವಾರಿಯನ್ನು ಕಂಟ್ರಾಕ್ಟರ್‌ಗಳಿಗೆ ಏನಾದರೂ ಲೀಸ್‌ಗೆ ಕೊಟ್ಟಿದ್ದೀರಾ ಎಂಬುದನ್ನು ಮಾನ್ಯ ಸಭೆಗೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ರಾಜ್ಯ ಸರ್ಕಾರಕ್ಕೆ ಆಡಳಿತವನ್ನು ನಡೆಸುವ ಶಕ್ತಿ ಇದೆ. ಆದರಲ್ಲಿ ಅನುಮಾನವೇ ಬೇಡ. ಹಿಂದೆ ಇಂಥ ಪ್ರಸಂಗಗಳು ಬಂದಾಗ ಸರ್ಕಾರ ಕ್ರಮ ತೆಗೆದುಕೊಂಡಿದೆ. ಈ ರೀತಿ ವಸೂಲ್ಮಾಡುವುದನ್ನು ನಿಲ್ಲಿಸುವುದಕ್ಕೆ ನಾವು ಉಗ್ರ ಕ್ರಮವನ್ನು ತೆಗೆದುಕೊಂಡಿದ್ದೇವೆ. ಕೇವಲ ಮೈನ್ಸ್ ಅಂಡ್ ಜಿಯಲಾಜಿಕಲ್ ಡಿಪಾರ್ಟ್‌ಮೆಂಟ್ ಒಂದೇ ಅಲ್ಲ, ಇಡೀ ರಾಜ್ಯದಲ್ಲಿ ಎಲ್ಲೆಲ್ಲಿ ಇಂಥ ಬಾಬುಗಳಲ್ಲಿ ರಾಜ್ಯದ ಬೊಕ್ಕಸಕ್ಕೆ ಬರಬೇಕಾದ ಹಣ ಸೋರಿಹೋಗುತ್ತಿದೆ, ಅದನ್ನು ಪರಿಶೀಲಿಸಲು ಮತ್ತು ತಡೆಗಟ್ಟಲು ಇದ ವರೆಗೆ ನಮ್ಮ ಸಿಬ್ಬಂದಿಯ ಕೊರತೆ ಇತ್ತು. ಆದರೆ **ಈಗ** ಇದಕ್ಕಾಗಿ ಒಂದು ಸ್ಕ್ವಾಡನ್ನೇ ನೇಮಕ ಮಾಡಿದ್ದೇವೆ. ನಮ್ಮ ಹೊಸ ಸರ್ಕಾರ ಬಂದ ಮೇಲೆ ರಾಜ್ಯದ ಬೊಕ್ಕಸಕ್ಕೆ ಸುಮಾರು 8–10 ಕೋಟಿ ರೂಪಾಯಿಗಳಷ್ಟು ಆದಾಯ ಮೈನ್ಸ್ ಅಂಡ್ ಜಿಯಲಾಜಿಕಲ್ ಡಿಪಾರ್ಟ್‌ಮೆಂಟ್‌ನಿಂದ ಬರುತ್ತಿದೆ.

ಒಬ್ಬ ಮಾನ್ಯ ಸದಸ್ಯರು. ಈಗ ಕನಕಪುರದಲ್ಲಿ ವಸೂಲ್ಮಾಡುತ್ತಿದ್ದಾರೆ. ಇದಕ್ಕೆ ಹಿಂದಿನ ಸರ್ಕಾರದವರೇ ಅನುಮತಿಯನ್ನು ಕೊಟ್ಟಿದ್ದಾರೆ. ಇದು ಹೊಸದೇನು ಅಲ್ಲ. ಈ ವಿಚಾರ ಮಾನ್ಯ ಸದಸ್ಯರಿಗೆ ಗೊತ್ತಿದ್ದರೂ ಕೂಡ ಮತ್ತೆ ಇದಕ್ಕೆ ಸಂಬಂಧಪಟ್ಟಂತೆ ಪ್ರಶ್ನೆಯನ್ನು ಕೇಳಿದ್ದಾರೆ ಆಷ್ಟೇ.

ಶ್ರೀ ಬಿ. ದೊಡ್ಡ ಬೋರೇಗೌಡ —ಸ್ವಾಮಿ, ಈ ಮನೆಯ ಯಾವ ಸದಸ್ಯರೇ ಆಗಲಿ, ಆ ಕಲ್ಲುಗಳನ್ನು ಸಾಗಿಸಲು ಅನುಮತಿ ಕೋರಿ ಅರ್ಜಿಗಳನ್ನು ಸಲ್ಲಿಸಿದ್ದಾರೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ. — ಅಥಾವಂದ್ದು ಯಾವುದೂ ಇಲ್ಲ. ಆದರೆ ಹಿಂದೆ ಯಾರೋ ಒಬ್ಬರು ಲೋಕಸಭಾ ಸದಸ್ಯರು ಅರ್ಜಿಯನ್ನು ಇದಕ್ಕಾಗಿ ಸಲ್ಲಿಸಿದ್ದರು. ಆದರೆ ಅವರಿಗೂ ಕೂಡ ಅನುಮತಿ ಕೊಟ್ಟಿಲ್ಲ.

ಶ್ರೀ ಕೆ. ಜೆ. ಶ್ರೀನಿವಾಸಮೂರ್ತಿ.—ಹಂತ ಹಂತವಾಗಿ ಗುತ್ತಿಗೆಯನ್ನು ಬೇರೆಯವರಿಗೆ ಕೊಡುವುದನ್ನ ತಪ್ಪಿಸಿ ಎಂ. ಎಂ. ಎಲ್. ನವರಿಗೇ ಕೊಡುವುದಾಗಿ ತಾವು ಅಪ್ಪಣೆ ಕೊಡಿಸಿದ್ದೀರಿ. ಈ ಕೆಲಸವನ್ನು ಇನ್ನು ಎಷ್ಟು ದಿವಸದಲ್ಲಿ ಮಾಡುತ್ತೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ವಿಚಾರ ನಮ್ಮ ರಾಜ್ಯ ಸರ್ಕಾರದ ಪರಿಮಿತಿಯಲ್ಲಿಲ್ಲವಾದ್ದರಿಂದ ಇದರ ಬಗ್ಗೆ ನಾವು ಕೇಂದ್ರ ಸರ್ಕಾರದೊಡನೆ ಸಮಾಲೋಚನೆ ಮಾಡುತ್ತಿದ್ದೇವೆ

ವಿಷಯ : ಹುಕ್ಕೆರಿ ತಾಲ್ಲೂಕಿನ ಹಿರಣ್ಯಕೇಶಿ ನದಿಯ ಮೇಲೆ ಗೋಟೂರು ವೇಯರ್ ಹಾಗೂ ಕೋಚರಿ ವೇಯರ್‌ಗಳ ಮಾಹಿತಿ ಬಗ್ಗೆ.

ಪ್ರಶ್ನೆ. 163(127) ಶ್ರೀ ಮಲ್ಲಪ್ಪರಗೌಡ ಎಸ್. ಪಾಟೀಲ್ (ಸಂಕೇಶ್ವರ). — ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಹಿರಣ್ಯಕೇಶಿ ನದಿಯ ಮೇಲೆ ಇದ್ದ ಗೋಟೂರು ವೇಯರ್, ಕಟ್ಟಡಕ್ಕಾಗಿ ತಗುಲಿದ ಪೆಚ್ಚ ಖರ್ಚು ಎಷ್ಟು ;

ಆ) ಈ ವೇಯರನ್ನು ನಿರ್ಮಾಣ ಮಾಡಲು ಕಾರಣಗಳೇನು ;

ಇ) ಈ ವೇಯರದಲ್ಲಿ ಎಷ್ಟು ಟಿ. ಎಂ. ಸಿ. ನೀರು ಸಂಗ್ರಹಣೆ ಆಗುತ್ತದೆ.

ಈ) ಕಳೆದ ಐದು ವರ್ಷದಲ್ಲಿ ಗೋಟೂರು ವೇಯರ್‌ನಲ್ಲಿ ನೀರು ಬತ್ತಿಹೋದ ಪ್ರಾರಂಭದ ತಿಂಗಳು ಹಾಗೂ ಮಳೆಗಾಲದಲ್ಲಿ ನೀರು ಬಂದ ತಾರೀಖು ಯಾವುದು.

ಉ) ಕೋಚೆರಿ ವೇಯರಕ್ಕಾಗಿ ತಗಲಿದ ಖರ್ಚು ಎಷ್ಟು ;

ಊ) ಇದರಲ್ಲಿ ಎಷ್ಟು ಟಿ. ಎಂ. ಸಿ. ನೀರು ನಿಲ್ಲುತ್ತದೆ. ?

ಉತ್ತರ. ಶ್ರೀ ಆರ್. ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಸಚಿವರು). —

ಅ) 1,44,200 ರೂ.ಗಳು ಆ) ನೀರಾವರಿ ಸೌಲಭ್ಯ ಒದಗಿಸಲು ಈ ವೇಯರನ್ನು ಕಟ್ಟಲಾಯಿತು. ಇ) 0.165 ಟಿ. ಎಂ. ಸಿ.

ಈ) ಸಾಮಾನ್ಯವಾಗಿ ಮಳೆಗಾಲದ ಆರಂಭ ಅಂದರೆ ಜೂನ್ ತಿಂಗಳಲ್ಲಿ ನದಿಯಲ್ಲಿ ಪ್ರವಾಹ ಪ್ರಾರಂಭವಾಗುತ್ತದೆ. ಮತ್ತು ಫೆಬ್ರುವರಿ ತಿಂಗಳಲ್ಲಿ ನೀರು ಬತ್ತಿ ಹೋಗುತ್ತದೆ. ಆದರೆ ನಿರ್ದಿಷ್ಟ ತಾರೀಖು ಹೇಳಲು ಆಗುವುದಿಲ್ಲ. ಉ) 1,14,619 ರೂ.ಗಳು. ಊ) 0.072 ಟಿ. ಎಂ. ಸಿ.

ಶ್ರೀ ಮಲ್ಲಾರಗೌಡ ಎಸ್ ಪಾಟೀಲ್.—ಸ್ವಾಮಿ, ಗೋಟೂರು ವೇಯರ್ ಕಟ್ಟಡಕ್ಕಾಗಿ 1,44,200 ರೂ.ಗಳು ಖರ್ಚಾಗಿದೆ ಎಂದು ಹೇಳಿದ್ದೀರಿ. ನನಗೆ ತಿಳಿದಿರುವಂತೆ ಈ ಕಟ್ಟಡಗಳು 20 ವರ್ಷಕ್ಕಿಂತ ಮುಂಚಿತವಾಗಿ ಕಟ್ಟಲಾಗಿದೆ. ಈ ನೀರಾವರಿ ಪ್ರವೇಶದ ಟ್ಯಾಕ್ಸ್‌ನ್ನು ವಜಾ ಮಾಡುವುದಕ್ಕೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಫೆಬ್ರುವರಿ ತಿಂಗಳಿನಿಂದ ಇದರಲ್ಲಿ ನೀರು ಬತ್ತಿ ಹೋಗುತ್ತ